ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

3

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE :

# ಆಂಗಿಕ ಪ್ರದರ್ಶನ: ಶಾಸಕ ಸಂಗಮೇಶ್ ಅಮಾನತು

## ಶರ್ಟ್ ಕಳಚಿ ಭದ್ರಾವತಿ ಶಾಸಕ ಅಸಭ್ಯ ವರ್ತನೆ | ಸದನದಲ್ಲಿ ಭಾರಿ ಕೋಲಾಹಲ

- ಒಂದು ರಾಷ್ಟ್ರ, ಒಂದು ಚುನಾವಣೆಯ ಚರ್ಚೆ ವೇಳೆ ಕಾಂಗ್ರೆಸ್ ಸದಸ್ಯರ ಪ್ರತಿಭಟನೆ
- ಸಂಗಮೇಶ್ ವರ್ತನೆಗೆ ಸಭಾಧ್ಯಕ್ಷ ಕಾಗೇರಿ ಸೇರಿ ಆಡಳಿತ ಪಕ್ಷದ ಸದಸ್ಯರ ಖಂಡನೆ
- 'ಒನ್ ನೇಷನ್, ಒನ್ ಎಲೆಕ್ಷನ್' ಇದು ಆರ್‌ಎಸ್‌ಎಸ್ ಅಜೆಂಡಾ; ಕಾಂಗ್ರೆಸ್
- ಚರ್ಚೆಯ ಪ್ರತಿ ಹರಿದು ಹಾಕಿದ ಸಿದ್ದರಾಮಯ್ಯ, ಸದನದ ಬಾವಿಗಿಳಿದು ಪ್ರತಿಭಟನೆ

■ ವಿಶ್ವವಾಣಿ ಸುದ್ದಿಮನೆ ವಿಧಾನಸೌಧ 5/3/21

ಸರಕಾರ ತಮ್ಮ ಮೇಲೆ ದ್ವೇಷ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿ ಭದ್ರಾವತಿ ಶಾಸಕ ಸಂಗಮೇಶ್ ಸದನದಲ್ಲಿ ಶರ್ಟ್ ಕಳಚಿ ಅವಾಂತರ ಮಾಡಿದ್ದಾರೆ.

ಒಂದು ರಾಷ್ಟ್ರ, ಒಂದು ಚುನಾವಣೆಯ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ನಡೆಸುತ್ತಿದ್ದರು. ಆಗ ಏಕಾಏಕಿ ಶರ್ಟ್ ಕಳಚಿ ಪ್ರತಿಭಟನೆ ನಡೆಸಿದ ಸಂಗಮೇಶ್, ಸರಕಾರ ಭದ್ರಾವತಿಯಲ್ಲಿ ದ್ವೇಷ ರಾಜಕಾರಣ ಮಾಡುತ್ತಿದ್ದು, ತಮ್ಮ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿ ಪ್ರಕರಣ ದಾಖಲು ಮಾಡುತ್ತಿದೆ ಎಂದು ಆರೋಪಿಸಿದರು. ಡಿಕೆಶಿ, ಅವರನ್ನು ತಡೆದು ಶರ್ಟ್ ಹಾಕಿಸಿ, ತಮ್ಮ ಜಾಗಕ್ಕೆ ಮರಳುವಂತೆ ಸೂಚಿಸಿದರು. ಇದರಿಂದ ಸದನದಲ್ಲಿ ಕೆಲಕಾಲ ಗದ್ದಲದ ವಾತಾವರಣ ಸೃಷ್ಟಿಯಾಯಿತು.

ಸಂಗಮೇಶ್ ಅವರ ವರ್ತನೆಯನ್ನು ಸಭಾಧ್ಯಕ್ಷ ಕಾಗೇರಿ ಸೇರಿ ಆಡಳಿತ ಪಕ್ಷದ ಸದಸ್ಯರು ಖಂಡಿಸಿದ್ದರು. ಈ ಬೆಳವಣಿಗೆಯ ನಂತರ ಸದನ ಕಲಾಪವನ್ನು 15 ನಿಮಿಷಗಳ ಕಾಲ ಮುಂದೂಡಲಾಗಿತ್ತು. ಮತ್ತೆ ಸದನ ಸಮಾವೇಶಗೊಂಡಾಗ ಸಂಗಮೇಶ್ ಅವರ ಅಮಾನತು ಪ್ರಸ್ತಾಪವನ್ನು ಗೃಹಸಚಿವ ಬಸವರಾಜ ಬೊಮ್ಮಾಯಿ ಅವರು ಮಂಡಿಸಿದರು. ಇದನ್ನು ಕೈಗೆತ್ತಿಕೊಂಡ ಸ್ಪೀಕರ್ ಕಾಗೇರಿ, ಸಂಗಮೇಶ್ ವಿರುದ್ಧ ಕ್ರಮಕ್ಕೆ ಮುಂದಾದರು.

**ಒಂದು ವಾರ ಅಮಾನತು:** ಸಂಗಮೇಶ್ ಅವರ ನಡವಳಿಕೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ ಬಿಜೆಪಿ ಶಾಸಕರು, ಅವರನ್ನು ಸದನದಿಂದ ಹೊರಹಾಕುವಂತೆ ಸ್ಪೀಕರ್‌ಗೆ ಮನವಿ ಮಾಡಿಕೊಂಡರು. ಈ ಸಂಬಂಧ ಬೊಮ್ಮಾಯಿ ಅವರು ಪ್ರಸ್ತಾಪ ಮಂಡಿಸಿ, ಅಮಾನತಿಗೆ ಶಿಫಾರಸು ಮಾಡಿದ್ದರು. ಕಾಂಗ್ರೆಸ್ ಸದಸ್ಯರ ಧರಣಿಯಿಂದ ಕೆಲ ಕಾಲ ಮುಂದೂಡಲಾಗಿದ್ದ ಸದನ ಮಧ್ಯಾಹ್ನ 1.20ಕ್ಕೆ ಸಮಾವೇಶಗೊಂಡಾಗ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು, ಸಂಗಮೇಶ್ ಅಮಾನತು ನಿರ್ಧಾರ ಪ್ರಕಟಿಸಿದರು.

**ಕಾಂಗ್ರೆಸ್‌ನ ಧರಣಿ, ಪ್ರತಿಭಟನೆ:** ಮೊದಲಿಗೆ ವಿಧಾನಸಭೆಯಲ್ಲಿ ಚರ್ಚೆಗೆ ಬಂದ 'ಒಂದು ರಾಷ್ಟ್ರ, ಒಂದು ಚುನಾವಣೆ' ವಿಷಯಕ್ಕೆ ಕಾಂಗ್ರೆಸ್ ನಾಯಕರು ಆಕ್ಷೇಪ ವ್ಯಕ್ತಪಡಿಸಿ, ಬಾವಿಗಿಳಿದು ಪ್ರತಿಭಟನೆ ನಡೆಸಿದರು. ಯಾವ ನಿಯಮದಲ್ಲಿ ಈ ವಿಷಯದ ಚರ್ಚೆ ನಡೆಯುತ್ತಿದೆ ಎಂಬುದನ್ನು ಸದನಕ್ಕೆ ತಿಳಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಮಾತನಾಡಿ, ಒನ್ ನೇಷನ್, ಒನ್ ಎಲೆಕ್ಷನ್ ಚರ್ಚೆಗೆ ನಮ್ಮ ಒಪ್ಪಿಗೆಯಿಲ್ಲ. ಇದು ಆರ್‌ಎಸ್‌ಎಸ್ ಅಜೆಂಡಾ ಆಗಿದೆ. ಯಾವುದೇ ಕಾರಣಕ್ಕೂ ಈ ಚರ್ಚೆಗೆ ಸಮ್ಮತಿಯಿಲ್ಲ ಎಂದು ಪಟ್ಟು ಹಿಡಿದರು. ಕಾಂಗ್ರೆಸ್ ಪ್ರತಿಭಟನೆಗೆ ಗೃಹ ಸಚಿವ ಬೊಮ್ಮಾಯಿ ಬೇಸರ ವ್ಯಕ್ತಪಡಿಸಿ, ಈ ವಿಷಯದ ಚರ್ಚೆ ಅವಶ್ಯಕವಿದೆ. ನೀವು ಇಂತಹ ಉದ್ಧಟತನ ತೋರಬಾರದು, ಪ್ರತಿಪಕ್ಷವಾಗಿ ಸರಿಯಾಗಿ ನಡೆದುಕೊಳ್ಳಿ ಎಂದರು.

### ಹಿಟ್ಲರ್ ಸಂಸ್ಕೃತಿ

ಪ್ರತಿಪಕ್ಷದ ಒಪ್ಪಿಗೆ ಇಲ್ಲದೆ ಚರ್ಚೆಗೆ ಅವಕಾಶ ನೀಡಿದ್ದು ಮತ್ತು ಸಂಗಮೇಶ್ ಅಮಾನತು ವಿಚಾರದಲ್ಲಿ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಕಾಂಗ್ರೆಸ್ ನಾಯಕರು, ಪ್ರತಿಭಟನೆ ನಡೆಸಿದರು. ಇದರಿಂದ ನಾಲ್ಕು ಬಾರಿ ಸದನವನ್ನು ಮುಂದೂಡಲಾಯಿತು. ಮಧ್ಯಾಹ್ನ ಮೂರು ಗಂಟೆಗೆ ಕಲಾಪ ಆರಂಭವಾದಾಗ ಕಾಂಗ್ರೆಸ್ ನಾಯಕರು ಸಂಗಮೇಶ್ ಅವರ ಅಮಾನತು ಆದೇಶ ಹಿಂಪಡೆಯುವಂತೆ ಸ್ಪೀಕರ್‌ಗೆ ಒತ್ತಾಯ ಮಾಡಿದರು. ಸ್ಪೀಕರ್ ಇದಕ್ಕೆ ಒಪ್ಪದಿದ್ದಾಗ, ನಿಮ್ಮದು ಹಿಟ್ಲರ್ ಆಡಳಿತದ ಪ್ರತಿರೂಪ ಎಂಬಂತಿದೆ. ನಿಮ್ಮಷ್ಟಕ್ಕೆ ನೀವೇ ನಿರ್ಧಾರ ತೆಗೆದುಕೊಂಡು, ಆ ಬಗ್ಗೆ ಚರ್ಚೆಗೂ ಅವಕಾಶ ನೀಡದೆ ತೀರ್ಮಾನ ತೆಗೆದುಕೊಳ್ಳುತ್ತೀರಿ, ಸಂಗಮೇಶ್‌ಗೆ ನಿಮ್ಮ ಪಕ್ಷದ ನಾಯಕರು ನೀಡುತ್ತಿರುವ ಕಿರುಕುಳದ ಬಗ್ಗೆ ಸದನದಲ್ಲಿ ಚರ್ಚೆ ಮಾಡಲು ಅವಕಾಶ ಕೊಡುತ್ತಿಲ್ಲ ಎಂದು ಗುಡುಗಿದರು.

ಭದ್ರಾವತಿ ಜನ ನನ್ನನ್ನು ಮೂರು ಬಾರಿ ಆಯ್ಕೆ ಮಾಡಿದ್ದಾರೆ. ಆರ್‌ಎಸ್‌ಎಸ್, ಬಿಜೆಪಿ, ಬಜರಂಗದಳದವರು ಭದ್ರಾವತಿಯಲ್ಲಿ ಕೋಮುಗಲಭೆ ಮಾಡಬೇಕು ಅಂದುಕೊಂಡಿದ್ದಾರೆ. ಕರಾವಳಿಯ ರೀತಿಯಲ್ಲೇ ಹಿಂದುತ್ವದಿಂದ ಗೆಲ್ಲಬಹುದು ಎಂದು ನನ್ನ ಮತ್ತು ಕುಟುಂಬದ ಮೇಲೆ ಅಟ್ರಾಸಿಟಿ ಕೇಸ್ ಹಾಕಿದ್ದಾರೆ. ನಾನು ಕಾಂಗ್ರೆಸ್ ಶಾಸಕನಾಗಿರುವ ಕಾರಣ, ಬಿಜೆಪಿ ನಾಯಕರು ಕುತಂತ್ರ ಮಾಡಿದ್ದಾರೆ.

- ಬಿ.ಕೆ.ಸಂಗಮೇಶ್ ಭದ್ರಾವತಿ ಶಾಸಕ



ಸದನದಲ್ಲಿ ಶರ್ಟ್ ಕಳಚಿದ ಸಂಗಮೇಶ್.